**ಓ.ಎಸ್. ನಂಃ 160/2020**

**ಪಿ.ಡಬ್ಲ್ಯೂಃ 1**

**ದಿನಾಂಕ 01.07.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಎಮ್.ಸಿ.ಎಸ್. ವಕೀಲರಿಂದಃ</u>**

1. 4 ನೇ ಪ್ರತಿವಾದಿ ನನ್ನ ತಂದೆ. 1 ನೇ ಪ್ರತಿವಾದಿ ನನ್ನ ತಂದೆಯ ತಾಯಿ ಅಂದರೆ ನನ್ನ ಅಜ್ಜಿ. ಪ್ರತಿವಾದಿ ಸಂಖ್ಯೆ 2,3 ಮತ್ತು 5 ರಿಂದ 7 ರವರು 4 ನೇ ಪ್ರತಿವಾದಿಯ ಸಹೋದರ ಮತ್ತು ಸಹೋದರಿಯರು. 8 ನೇ ಪ್ರತಿವಾದಿ ನನ್ನ ಸ್ವಂತ ತಮ್ಮ. 1 ರಿಂದ 7 ನೇ ಪ್ರತಿವಾದಿಯರ ಮಧ್ಯೆ ದಾವಾ ಆಸ್ತಿಯಲ್ಲಿ ಯಾವುದೇ ವಿಭಾಗ ಆಗಿರುವುದಿಲ್ಲ. ಈ ದಾವೆಯಲ್ಲಿ 4 ನೇ ಪ್ರತಿವಾದಿ ಸಲ್ಲಿಸಿರುವ ಪ್ರತಿವಾದ ಪತ್ರದ ಬಗ್ಗೆ ನನಗೆ ಮಾಹಿತಿ ಇಲ್ಲ.

2. ದಾವಾ ಆಸ್ತಿಗಳೆಲ್ಲವೂ ಸಹ ನನ್ನ ತಾತನಾದ ಯೋಗಣ್ಣರವರಿಗೆ ಸೇರಿದ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳಲ್ಲಿ 4 ನೇ ಪ್ರತಿವಾದಿಗೆ ಬಂದ ಹಿಸ್ಸೆಯಲ್ಲಿ ಮಾತ್ರ ನನಗೆ ಹಿಸ್ಸೆ ಇರುತ್ತದೆ ಎಂದರೆ ಸರಿ. ದಿನಾಂಕ 09.11.2016 ರ ವಿಭಾಗ ಪತ್ರವನ್ನು ತೋರಿಸಿ ಸದರಿ ವಿಭಾಗ ಪತ್ರದ ಪ್ರಕಾರ ಪ್ರತಿವಾದಿಯರ ಮಧ್ಯೆ ದಾವಾ ಆಸ್ತಿಗಳ ಸಂಬಂಧ ಪಾಲು ವಿಭಜನೆ ಆಗಿರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಗಳನ್ನು ಮೋಸದಿಂದ ಮಾರಾಟ ಮಾಡುವ ಉದ್ದೇಶದಿಂದ ಸದರಿ ದಾಖಲೆಯನ್ನು ಸೃಷ್ಟಿಸಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಗಳಲ್ಲಿ ಪಾಲು ಕೊಡುವಂತೆ ಕೇಳಲು ನಾನು 4 ನೇ ಪ್ರತಿವಾದಿಯರ ಮನೆಗೆ ಹೋಗಿರಲಿಲ್ಲ. ನಿಪಿ.2 ರಿಂದ ನಿಪಿ.8 ರ ದಾಖಲೆಗಳನ್ನು ನಾನು ತೆಗೆಸಿರುವುದಿಲ್ಲ ಮತ್ತು ಅವುಗಳನ್ನು ಯಾರು ತೆಗೆಸಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದಿನಾಂಕ 09.11.2016 ರ ವಿಭಾಗ ಪತ್ರದ ಬಗ್ಗೆ ನಾನು ಈ ದಾವೆಯಲ್ಲಿ ಹೇಳಿರುವುದಿಲ್ಲ ಎಂದರೆ ಸಾಕ್ಷಿಯು ಸದರಿ ವಿಭಾಗ ಪತ್ರದ ಬಗ್ಗೆ ಮಾಹಿತಿಯೇ ಇಲ್ಲ ಎಂದು ನುಡಿದಿರುತ್ತಾರೆ. ಈಗಾಗಲೇ ದಿನಾಂಕ 09.11.2016 ರ ವಿಭಾಗ ಪತ್ರದ ಪ್ರಕಾರ ದಾವಾ ಆಸ್ತಿಗಳೆಲ್ಲವೂ ಸಹ ವಿಭಾಗವಾಗಿರುವುದರಿಂದ ಈ ದಾವೆ ಊರ್ಜಿತವಾಗುವುದಿಲ್ಲ ಎಂದರೆ ಸರಿಯಲ್ಲ. ನಾನು ದುರುದ್ದೇಶದಿಂದ ಈ ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

3. 4 ನೇ ಪ್ರತಿವಾದಿಯ ಸಹೋದರಿಯಾದ ಜಮುನಾರವರು ಮರಣ ಹೊಂದಿದ್ದು, ಸದರಿ ಜಮುನಾರವರ ಗಂಡ ಮತ್ತು ಮಕ್ಕಳು ಜೀವಂತವಿದ್ದಾರೆ. ಸದರಿ ಜಮುನಾರವರ ವಾರಸುದಾರರನ್ನು ನಾನು ಈ ದಾವೆಯಲ್ಲಿ ಪಕ್ಷಕಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ದಿನಾಂಕ 09.11.2016 ರ ವಿಭಾಗ ಪತ್ರದ ಪ್ರಕಾರ ನಿಪಿ.2 ರಿಂದ ನಿಪಿ.8 ರ ದಾಖಲೆಗಳಂತೆ ದಾವಾ ಆಸ್ತಿಗಳೆಲ್ಲವು ಆಯಾ ಹಿಸ್ಸೆದಾರರ ಹೆಸರಿಗೆ ವರ್ಗಾವಣೆ ಆಗಿರುತ್ತದೆ ಎಂದರೆ ಸಾಕ್ಷಿಯು ಮೋಸದಿಂದ ಸದರಿ ವಿಭಾಗ ಪತ್ರವನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿದಿರುತ್ತಾರೆ. 4 ನೇ ಪ್ರತಿವಾದಿಯ ಜೀವಿತಾಧಿಯಲ್ಲಿ ವಿಭಾಗ ಪತ್ರಕ್ಕೆ ನನ್ನ ಸಹಿ ಅವಶ್ಯಕತೆ ಇದೆ ಎಂದರೆ ಸರಿಯಲ್ಲ. ದಿನಾಂಕ 09.11.2016 ರ ವಿಭಾಗ ಪತ್ರದಲ್ಲಿ ಪ್ರತಿವಾದಿಯರ ಹಿಸ್ಸೆಗೆ ಹೋದ ಆಸ್ತಿಗಳಲ್ಲಿ ನನಗೆ ಯಾವುದೇ ಭಾಗ ಇಲ್ಲ ಎಂದರೆ ಸರಿಯಲ್ಲ.

4. ದಾವಾ ಆಸ್ತಿಗಳು ನನ್ನ ತಾತನಿಗೆ ಸೇರಿದ ಆಸ್ತಿಗಳು ಎಂದು ತೋರಿಸಲು ನಾನುಯಾವುದೇ ದಾಖಲೆಗಳನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಆಸ್ತಿಗಳು ನನ್ನ ತಾತನಿಗೆ ಸೇರಿದ ಆಸ್ತಿಗಳು ಎಂದು ತೋರಿಸಲು ದಾಖಲೆಗಳನ್ನು ಹಾಜರುಪಡಿಸಲು ಸಾಧ್ಯವಿದ್ದರೇ ನಾನು ಹಾಜರುಪಡಿಸುತ್ತೇನೆ. ದಿನಾಂಕ 09.11.2016 ರ ವಿಭಾಗ ಪತ್ರದ ಪ್ರಕಾರ 4 ನೇ ಪ್ರತಿವಾದಿಯ ಹಿಸ್ಸೆಗೆ ಹೋದ ಆಸ್ತಿಯಲ್ಲಿ ಮಾತ್ರ ಹಕ್ಕು ಇದೆ ಎಂದರೆ ಸರಿಯಲ್ಲ. ಉಳಿದ ಪ್ರತಿವಾದಿಯರಿಗೆ ತೊಂದರೆ ಕೊಡುವ ಉದ್ದೇಶದಿಂದ ನಾನು ಈ ಸುಳ್ಳು ದಾವೆಯನ್ನು ಹೂಡಿರುತ್ತೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**